ಶ್ರೀ ಪಿ. ರಾಂದೇವ್.—ಮಾನ್ಯ ಅರ್ಥಮಂತ್ರಿಗಳು ಕ್ಯಾಷ್ ಫಿಕ್ಸೆಡ್ ಡಿಪಾಸಿಟ್, ಗೋಲ್ಡ್ ಜ್ಯೂಯಲರೀಸ್, ಸಿಲ್ವರ್ ಆರ್ಟಿಕಲ್ಸ್ ಇದರ ಒಂದು ಲಿಸ್ಟ್ ಕೊಟ್ಟಿದ್ದಾರೆ. ಈ ೨ಳ ಜನರ ಮೂವೆಬಲ್ ಪ್ರಾಪರ್ಟಿಸ್ ಬಗ್ಗೆ ಒಂದು ಲಿಸ್ಟ್ ಕೊಟ್ಟಿದ್ದಾರೆ. ಆದರೆ ಅವರ ಸ್ಥಿರಾಸ್ತಿಗಳ ಬಗ್ಗೆ ಲಿಸ್ಟ್ ಕೊಟ್ಟಿಲ್ಲಾ. ತಮಗೆ ಹೇಳಬೇಕಾದರೆ ಸುಬ್ಬಯ್ಯನವರದ್ದು ಮತ್ತು ಗೋವಿಂದ್ ಅನ್ನುವದ್ದು ಪೇಪರ್‌ನಲ್ಲಿ ಬಂದಿದೆ. why are you hushing up this information? I want a reply from the Hon 'ble Minister.

SRI M. VEERAPPA MOILY.—The matter is still under investigation. Immediately after the investigation is over we will be coming with details.

MR. DEPUTY SPEAKER.—Next question.

Rise in Prices of Vegetables in Bangalore City

584. SRI P. RAMDEV (Malleswaram)—Will the Minister of State for Horticulture and Prisons be pleased to state.—

(a) whether it has come to the notice of the Government that the prices of vegetables has gone up abnormally in Bangalore City;

(b) if so, the action taken by Government to control the prices?

SRI K YENKATAPPA (Minister of State for Horticulture and Prisons).—

(a) Yes.

(b) The Fruit and Vegetables Growers Co-operative Societies are being formed through Government in Rural areas to Control prices.

ಶ್ರೀ ಪಿ. ರಾಮದೇವ್.— ನಾನು ೫ರಳಿನೇ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಕೆ. ಗಂಗಾಧರಗೌಡ (ವಾರ್ತೆ ಮತ್ತು ಯುವಜನಸೇವಾ ರಾಜ್ಯ ಮಂತ್ರಿಗಳು).—.....

ಶ್ರೀ ಪಿ. ರಾಮದೇವ್.—ಸ್ವಾಮಿ, ತರಕಾರಿ ಮಂತ್ರಿಗಳು ಇಲ್ಲ ಇವರೇ ಉತ್ತರ ಕೊಡುತ್ತಿದ್ದಾರಲ್ಲಾ ಸ್ವಾಮಿ ?

MR. DEPUTY SPEAKER.—I have permitted him to reply on behalf of the Minister for Horticulture.

ಶ್ರೀ ಪಿ. ರಾಮದೇವ್. – ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಬೆಲೆಗಳನ್ನು ಹತೋಟಿಯಲ್ಲಿಡಲು ಸರ್ಕಾರದ ವತಿಯಿಂದ ಗ್ರಾಮಾಂತರ ಪಟ್ಟಣದಲ್ಲಿ ಹಣ್ಣು ಮತ್ತು ತರಕಾರಿ ಬೆಳೆಗಾರರ ಸಹಕಾರ ಸಂಘಗಳನ್ನು ಸಂಘಟಿಸಲಾಗುತ್ತಿದೆ. ಅಂತ ಹೇಳಿದ್ದೀರಿ. ಈ ರೀತಿಯಾಗಿ ಸಂಘಟನೆ ಮಾಡುವುದರಿಂದ ಯಾವ ರೀತಿಯಾಗಿ ಬೆಲೆ ಹತೋಟಿಯಲ್ಲಿಡಲು ಸಾಧ್ಯ ಎನ್ನುವುದನ್ನು ಹೇಳುತ್ತೀರಾ?

ಶ್ರೀ ಕೆ. ಗಂಗಾಧರಗೌಡ —ಅಧ್ಯಕ್ಷರೇ, ಹಳ್ಳಿಗಳಲ್ಲಿ ತರಕಾರಿ ಏನು ಬೆಳೆಸುತ್ತಾರೆ; ಅವರು ಅಲ್ಲಿ ಬೆಳೆದಂಥಾ ತರಕಾರಿಗಳನ್ನು ಅಲ್ಲಿರುವ ಸಂಘಸಂಸ್ಥೆಗಳಿಗೆ ಹಾಕುತ್ತಾರೆ. ಅವರು ಅಲ್ಲಿಂದ ಪಟ್ಟಣಕ್ಕೆ ತಂದು ಇಲ್ಲಿ ಮಾರಾಟ ಮಾಡುತ್ತಾರೆ. ಇದರಿಂದ ಈ ಬೆಲೆಗಳು ತನ್ನಷ್ಟಕ್ಕೆ ತಾನೇ ಕಡಿಮೆಯಾಗುವುದಕ್ಕೆ ಸಾಧ್ಯ ಇದೆ.

ಶ್ರೀ ಪಿ. ರಾಮದೇವ್.—ತಮಗೆ ಹೇಳಬೇಕಾದರೆ ಈಗ ತರಕಾರಿ ಬೆಲೆ ಏನೂ ಕಡಿಮೆಯಾಗಿಲ್ಲ. ತರಕಾರಿ ಬೆಲೆಯನ್ನು ಹತೋಟಿಯಲ್ಲಿಡಲು ಈ ರೀತಿ ಮಾಡುವುದರಿಂದ ಸಾಧ್ಯ ಇದೆ ಎನ್ನುವುದಾದರೆ ಇದುವರೆಗೆ ಎಷ್ಟೊಂದು ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿದ್ದೀವೆ ಅನ್ನುವುದನ್ನು ಹೇಳುತ್ತೀರಾ ? ಮತ್ತು ಈ ಸಹಕಾರ ಸಂಘಗಳ ಒಂದು ಸಂಘಟನೆಯಿಂದ ಇದುವರೆಗೆ ಬೆಲೆ ಏನಾದರೂ ಕಡಿಮೆ ಆಗಿದೆಯೇ ಹೇಳುತ್ತೀರಾ ? ಈಪೊತ್ತಿನ ದಿವಸ ತರಕಾರಿ ಬೆಲೆ ಹೇಳಬೇಕಾದರೆ ಟೊಪೊಟೋ ಒಂದು ಕೇಜಿಗೆ ೪ ರೂಪಾಯಿ ಇದೆ, ಬೀನ್ಸ್ ಬೆಲೆ ಒಂದು ಕೇಜಿಗೆ ೬ ರೂಪಾಯಿ ಇದೆ. ತಾವು ಹೇಳಿದ ಹಾಗೆ ಮಾಡಿದರೂ ಕೂಡ ಒಂದುವೇಳೆ ಬೆಲೆಗಳು ಕಡಿಮೆಯಾಗದೇ ಹೋದರೆ ಆವಾಗ ಇದರ ಬೆಲೆಯನ್ನು ನಿಯಂತ್ರಣ ಮಾಡುವುದಕ್ಕೆ ಏನು ಆಲೋಚನೆ ಮಾಡಿದ್ದೀರಾ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಕೆ. ಗಂಗಾಧರಗೌಡ.—ತಮಗೆ ಹೇಳಬೇಕಾದರೆ ಕಳೆದ ಸಾಲಿನಲ್ಲಿ ಬೆಂಗಳೂರಿನಲ್ಲಿ ಮಳೆ ಸರಿಯಾಗಿ ಬಂದಿಲ್ಲಾ ಕೋಲಾರ ಮತ್ತು ಬೆಂಗಳೂರು ಜಿಲ್ಲೆಯಲ್ಲಿ ಮುಖ್ಯವಾಗಿ ಈ ತರಕಾರಿ ಬೆಳೆಸುವುದಕ್ಕೆ ಆಗಿಲ್ಲ ಕಾರಣ ಏನೆಂದರೆ ಅಲ್ಲಿರುವ ಕೆರೆ ಮತ್ತು ಬಾವಿಗಳು ಬತ್ತಿಹೋಗಿರುವುದರಿಂದ ಹಾಗಾಗಿದೆ. ತಮಗೆಲ್ಲಾ ಇಲ್ಲಿ ಸರಿಯಾಗಿ ಮಳೆ ಬಾರದೇ ಇರುವುದು ಗೊತ್ತಿದೆ. ಮಳೆಯಾಗದೇ ಹೋದರೆ ತರಕಾರಿಯಾಗಲಿ ಅಥವಾ ಯಾವ ಬೆಳೆಯೇ ಆಗಲಿ ಬೆಳೆಸಲಾಗುವುದಿಲ್ಲ, ಬಹಳ ತೊಂದರೆಯಾಗುತ್ತದೆ. ಮಳೆ ಬಂದನಂತರ ಜೂನ್ ಆದನಂತರ ಮಳೆ ಬಿದ್ದಾಗ ತರಕಾರಿ ಬೆಳೆಯುತ್ತಾರೆ, ಆವಾಗ ಈ ತರಕಾರಿ ಬೆಲೆ ಸ್ವಲ್ಪ ಕಡಿಮೆಯಾಗುವ ಹಾಗೆ ಕಾಣುತ್ತದೆ.

ಶ್ರೀ ಡಿ. ಟಿ. ಮಾಯಣ್ಣ.—ಈ ಪ್ರಶ್ನೆಯ (ಅ) ಗೆ ಉತ್ತರವಾಗಿ ಬೆಲೆಗಳನ್ನು ಹತೋಟಿಯಲ್ಲಿಡಲು ಸರಕಾರದ ಮತಿಯಿಂದ ಗ್ರಾಮಾಂತರ ಮಟ್ಟದಲ್ಲಿ ಪಣ್ಣು ಮತ್ತು ತರಕಾರಿ ಬೆಳೆಗಾರರ ಸಹಕಾರ ಸಂಘಗಳನ್ನು ಸಂಘಟಿಸಲಾಗುತ್ತಿದೆ ಅಂತ ಹೇಳಿದ್ದೀರಲ್ಲಾ ಯಾವ್ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಸಂಘಗಳನ್ನು ಮಾಡಿದ್ದೀರಿ ಮತ್ತು ಎಷ್ಟೆಷ್ಟು ಹಳ್ಳಿಗಳಿಗೆ ಇದರಿಂದ ಅನುಕೂಲವಾಗಿದೆ, ಎಷ್ಟು ಜನರು ಆ ಸಹಕಾರ ಸಂಘಗಳ ಮೂಲಕ ಅವರ ಹೆಸರಿನಲ್ಲಿ ಬಾವಿ ತೆಗೆದು ಈ ತರಕಾರಿ ಬೆಳೆಸಿದ್ದಾರೆ. ಎಷ್ಟೆಷ್ಟು ತಾಲ್ಲೂಕುಗಳಲ್ಲಿ ಈ ರೀತಿಯಾದ ಸಂಘಗಳು ಇವೆ ಅನ್ನುವುದನ್ನು ಹೇಳುತ್ತೀರಾ?

ಶ್ರೀ ಕೆ. ಗಂಗಾಧರಗೌಡ.—ಒಟ್ಟು ೯೬ ಸಂಘಗಳು ಇವೆ. ಬೆಂಗಳೂರು ಮತ್ತು ಕೋಲಾರ ಜಿಲ್ಲೆಯಲ್ಲಿ ಮಾಡಿದ್ದೇವೆ. ಇದರ ಬಗ್ಗೆ ವಿವರಗಳ ಮಾಹಿತಿ ಈಗ ನನ್ನ ಹತ್ತಿರ ಇಲ್ಲ. ಬೇಕಾದರೆ ತರಿಸಿಕೊಡುತ್ತೇನೆ.

SRI A. LAKSHMISAGAR.—This is an important question in the sense that as a citizen of Bangalore, particularly, we have the honour representing myself, Mr. Ramdev, and Mr. Chandrashekar and others to put this question. We are vitally interested and the Minister in-charge of the portfolio is not present. He also live in Bangalore. I am only claiming the legitimacy to ask this question.

MR. DEPUTY SPEAKER.—Every hon. member has got a right to ask question.

SRI A. LAKSHMISAGAR.—Sri K. Gangadara Gowda is not in a position to answer this question because he does not have sufficient information nor the knowledge of the functioning of the Department of which he is asked to answer. This is wholly an unsatisfactory way of answering the question and lack of responsibility on the part of the Government. This is my question. In Bangalore City K. R. Market, Russel Market, there are hundreds of gangs of middlemen, who by their acts of intimidation and acts of violence are subduing a large number of vegetable growers who bring their

produce to these two places and with their acts of gangsterism, the growers are compelled to sell their produce at very low prices and within a matter of hours, the same produce is sold at a very exhorbitant price. What action the Government has been able to take in K. R. Market and Russel Market ?

ಶ್ರೀ ಕೆ. ಗಂಗಾಧರಗೌಡ.—ಮಧ್ಯವರ್ತಿಗಳಿಂದಾಗಿ ಸರಿಯಾದ ಬೆಲೆ ರೈತರಿಗೆ ಸಿಕುತ್ತಾಇಲ್ಲ. ಅವರು ಕಡಿಮೆ ಬೆಲೆಗೆ ತೆಗೆದುಕೊಂಡು ಜಾಸ್ತಿ ಬೆಲೆಗೆ ಮಾರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದ್ದರಿಂದ ಅದಕ್ಕಾಗಿ ೧೦೦ ಬೀಡಿ ಅಂಗಡಿಗಳನ್ನು ಇದರ ಬಗ್ಗೆ ತೆರೆಯುಬೇಕನ್ನುವ ಉದ್ದೇಶ ಇದೆ. ಈಗಾಗಲೇ ೪೦ ಜಿಲ್ಲರೆ ಅಂಗಡಿಗಳನ್ನು ತೆರೆದಿದ್ದೇವೆ. ಅದಕ್ಕೆ ಬೇಕಾದಂಥಾ ಕಾರ್ಯಕ್ರಮಗಳನ್ನು ಸರ್ಕಾರದವರು ಕೈಗೊಳ್ಳುತ್ತಿದ್ದಾರೆ.

ಶ್ರೀ ಪಿ. ರಾಮದೇವ್.—ಸ್ವಾಮಿ, ನನ್ನದು ಒಂದು ಮುಖ್ಯವಾದ ಪ್ರಶ್ನೆ ಇದೆ. ಬೆಂಗಳೂರು ನಗರದಲ್ಲಿ ಈ ತರಕಾರಿಗಳ ಬೆಲೆಗಳೆಲ್ಲಾ ಏರಿರುವುದರಿಂದ ನಾವೆಲ್ಲಾ ಸಫರ್ ಮಾಡುತ್ತಿದ್ದೇವೆ. ಬೇರೆ ರಾಜ್ಯಗಳಿಗೆ ಈ ತರಕಾರಿಗಳನ್ನು ಏನು ಎಕ್ಸ್‌ಪೋರ್ಟ್ ಮಾಡುತ್ತಿದ್ದಾರೆ ಅದನ್ನು ಈ ಕೂಡಲೇ ನಿಲ್ಲಿಸಿದರೆ ಈ ಬೆಲೆಗಳೆಲ್ಲಾ ಇಳಿಯುತ್ತದೆ. ಈ ಬಗ್ಗೆ ಮಾನ್ಯ ಮಂತ್ರಿಯವರು ಪರಿಶೀಲನೆ ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಅದನ್ನು ನಾವು ಪರಿಶೀಲನೆ ಮಾಡುತ್ತೇನೆ.

Gol Gumbaz

567. Sri S. H. S. Bakshi (Bijapur)—Will the Minister of State for Information and Youth Services be pleased to state,—

(a) whether the Government has recommended to the Central Government for illuminating the historical monument, Gol Gumbaz;

(b) if not, whether the State Government take expeditious action to recommend to Central Government in this connection.

Sri K. Gangadhar Gowda (Minister of State for Information and Youth Services).—

(a) No.

(b) Recommendation to Government of India (Archaeological Survey of India) will be considered.

Sri S. H. S. Bhakshi.—Sir, In my question I had asked whether the State Government would recommend to the Central Government for illuminating the historical monument of Gol Gumbaz, which is a world famous one. This question was put in 1978. I request the Hon. Minister to kindly send the recommendation to the Government of India in this connection.

ಶ್ರೀ ಕೆ. ಗಂಗಾಧರಗೌಡ.—ಮಾನ್ಯ ಅಧ್ಯಕ್ಷರೇ, ನಾವು ಈ ಬಗ್ಗೆ ಬೇಕಾದಂಥ ಮಾಹಿತಿಯನ್ನು ತರಿಸಿಕೊಂಡು ವಿಚಾರ ಮಾಡಿ, ಈ ಗೋಲ್‌ಗುಂಬಜ್ ಮಾನ್ಯುಮೆಂಟ್ ಇರುವಂಥ ಜಾಗವನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಈ ವಿಚಾರದಲ್ಲಿ ನಾವು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತೇವೆ.